
ಐಸಿಎಆರ್ ಜೆಎಸ್‌ಎಸ್
ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು

# ದ್ವಿದಳ ಧಾನ್ಯ ಬೆಳೆಗಳು





ಲೇಖಕರು

ಶ್ರೀ ಶಾಮರಾಜ್

ಶ್ರೀಮತಿ ಹೆಚ್. ವಿ. ದಿವ್ಯಾ

ಶ್ರೀಮತಿ ನೇತ್ರಾವತಿ ಎತ್ತಿನಮನಿ

## ದ್ವಿದಳ ಧಾನ್ಯಗಳು

ದ್ವಿದಳ ಧಾನ್ಯಗಳನ್ನು ಬೆಳವಣಿಗೆಯ ಆಹಾರವೆಂದು ಕರೆಯುವರು. ಬೆಳೆಯುತ್ತಿರುವ ಮಕ್ಕಳಿಗೆ ದಿನನಿತ್ಯ ಆಹಾರದಲ್ಲಿ ಅವಶ್ಯಕವಾಗಿ ಬೇಕಾಗಿರುವ ಸಸಾರಜನಕ (ಪ್ರೋಟೀನ್) ಅಂಶವು ದ್ವಿದಳ ಧಾನ್ಯಗಳಲ್ಲಿ ಹೆಚ್ಚಾಗಿ ದೊರಕುತ್ತದೆ. ಇದು ದಿನದ ವೈವಿಧ್ಯಮಯ ಕಾರ್ಯಚಟುವಟಿಕೆಗಳಿಗೆ ಬಹಳ ಅಗತ್ಯವಾಗಿದೆ. ಇದರಲ್ಲಿರುವ ಪ್ರತಿ 1 ಗ್ರಾಂ ಸಸಾರಜನಕ 4 ಕಿಲೋ ಕ್ಯಾಲರಿಯಷ್ಟು ಶಕ್ತಿಯನ್ನು ಒದಗಿಸುತ್ತದೆ. ದಿನನಿತ್ಯದ ಆಹಾರದಲ್ಲಿ ಶೇ 25-30ರಷ್ಟು ಶಕ್ತಿ ದ್ವಿದಳ ಧಾನ್ಯದ ಬಳಕೆಯಿಂದ ದೇಹಕ್ಕೆ ದೊರಕಬೇಕು. ದ್ವಿದಳ ಧಾನ್ಯಗಳನ್ನು ಮೊಳಕೆಯಾಗಿ ಉಪಯೋಗಿಸುವುದರಿಂದ ಅವುಗಳಲ್ಲಿರುವ ಪೌಷ್ಟಿಕಾಂಶಗಳ (ಜೀವಸತ್ವ ಸಿ ಮತ್ತು ಬಿ) ಮಟ್ಟ ಹೆಚ್ಚಾಗುವುದಲ್ಲದೆ, ಕಡಿಮೆ ಅವಧಿಯಲ್ಲಿ ಪರಿವರ್ತನೆ ಹೊಂದಿ ಸುಲಭವಾಗಿ ಪಚನವಾಗುತ್ತವೆ.

**ಪ್ರತಿ 100 ಗ್ರಾಂ ದ್ವಿದಳ ಧಾನ್ಯಗಳಲ್ಲಿರುವ ಪೋಷಕಾಂಶಗಳ ಪಟ್ಟಿ**

| ಪೋಷಕಾಂಶಗಳು | ಉದ್ದು | ಅಲಸಂದೆ | ಹೆಸರು | ಕಡಲೆ | ಅವರೆ | ಹುರುಳಿ | ತೊಗರಿ |
|---|---|---|---|---|---|---|---|
| ಶಕ್ತಿ (ಕಿಲೋ ಕ್ಯಾಲರಿ) | 347 | 323 | 334 | 360 | 347 | 321 | 335 |
| ಪ್ರೋಟೀನ್ (ಗ್ರಾಂ) | 24 | 24.10 | 24 | 17.10 | 24.90 | 22 | 22.30 |
| ಕೊಬ್ಬು (ಗ್ರಾಂ) | 1.40 | 1.00 | 1.30 | 5.30 | 0.80 | 0.50 | 1.70 |
| ನಾರು (ಗ್ರಾಂ) | 0.90 | 3.80 | 4.10 | 3.90 | 1.40 | 5.30 | 4.80 |
| ಶರ್ಕರಪಿಷ್ಟ (ಗ್ರಾಂ) | 59.60 | 54.50 | 56.70 | 60.90 | 60.10 | 57.20 | 60.60 |
| ಖನಿಜ(ಗ್ರಾಂ) | 3.20 | 3.20 | 3.50 | 3.00 | 3.20 | 3.20 | 3.50 |
| ಸುಣ್ಣ (ಮಿ.ಗ್ರಾಂ) | 154 | 77 | 124 | 202 | 60 | 287 | 260 |
| ಕಬ್ಬಿಣ (ಮಿ.ಗ್ರಾಂ) | 3.80 | 8.60 | 4.40 | 4.6 | 2.70 | 6.77 | 5.10 |

## ಉದ್ದು

**ತಳಿ:** ಟಿ9
**ಬೆಳೆಯ ಅವಧಿ:** 85-90 ದಿನಗಳು
**ಬಿತ್ತನೆ ಕಾಲ:** ಏಪ್ರಿಲ್-ಮೇ
**ವಿಶೇಷತೆ:** ನೀರಾವರಿಗೆ ಹೆಚ್ಚು ಸೂಕ್ತವಾದ ತಳಿ
**ಇಳುವರಿ:** ಉತ್ತಮ ನಿರ್ವಹಣೆಯಲ್ಲಿ ಖುಷ್ಕಿ ಬೇಸಾಯದಲ್ಲಿ ಎಕರೆಗೆ 2.5-3 ಕ್ವಿಂಟಾಲ್‌ನಷ್ಟು ಹಾಗೂ ನೀರಾವರಿಯಲ್ಲಿ 4-5 ಕ್ವಿಂಟಾಲ್‌ನಷ್ಟು ಕಾಳಿನ ಇಳುವರಿ ನಿರೀಕ್ಷಿಸಬಹುದು.

**ತಳಿ:** ಎಲ್‌ಬಿಜಿ-791
**ಬೆಳೆಯ ಅವಧಿ:** 70-75 ದಿನಗಳು
**ಬಿತ್ತನೆ ಕಾಲ:** ಮೇ-ಜೂನ್
**ವಿಶೇಷತೆ:** ಹಳದಿ ಎಲೆ ರೋಗ ತಡೆದುಕೊಳ್ಳುವ ಶಕ್ತಿ ಹೊಂದಿದೆ
**ಇಳುವರಿ:** ಉತ್ತಮ ನಿರ್ವಹಣೆಯಲ್ಲಿ ಖುಷ್ಕಿ ಬೇಸಾಯದಲ್ಲಿ ಎಕರೆಗೆ 3-4 ಕ್ವಿಂಟಾಲ್‌ನಷ್ಟು ಹಾಗೂ ನೀರಾವರಿಯಲ್ಲಿ 5-6 ಕ್ವಿಂಟಾಲ್‌ನಷ್ಟು ಕಾಳಿನ ಇಳುವರಿ ನಿರೀಕ್ಷಿಸಬಹುದು.






**ತಳಿ:** ನಿರ್ಮಲ
**ಬೆಳೆಯ ಅವಧಿ:** 70-75 ದಿನಗಳು
**ಬಿತ್ತನೆ ಕಾಲ:** ಮೇ-ಜೂನ್
**ವಿಶೇಷತೆ:** ಹಳದಿ ಎಲೆ ರೋಗ ತಡೆದುಕೊಳ್ಳುವ ಶಕ್ತಿ ಹೊಂದಿದೆ. ಬೇಸಿಗೆಗೆ ಸೂಕ್ತವಾದ ತಳಿ
**ಇಳುವರಿ:** ಖುಷ್ಕಿ ಬೇಸಾಯದಲ್ಲಿ ಉತ್ತಮ ನಿರ್ವಹಣೆಯಲ್ಲಿ ಎಕರೆಗೆ 3-4 ಕ್ವಿಂಟಾಲ್‌ನಷ್ಟು ಹಾಗೂ ನೀರಾವರಿಯಲ್ಲಿ 5-6 ಕ್ವಿಂಟಾಲ್‌ನಷ್ಟು ಕಾಳಿನ ಇಳುವರಿ ನಿರೀಕ್ಷಿಸಬಹುದು.

**ತಳಿ:** ಎಲ್‌ಬಿಜಿ-625
**ಬೆಳೆಯ ಅವಧಿ:** 70-75 ದಿನಗಳು
**ಬಿತ್ತನೆ ಕಾಲ:** ಜನವರಿ-ಫೆಬ್ರವರಿ
**ವಿಶೇಷತೆ:** ಬೇಸಿಗೆಗೆ ಸೂಕ್ತವಾದ ತಳಿ
**ಇಳುವರಿ:** ಖುಷ್ಕಿ ಬೇಸಾಯದಲ್ಲಿ ಉತ್ತಮ ನಿರ್ವಹಣೆಯಲ್ಲಿ ಎಕರೆಗೆ 4.0-4.5 ಕ್ವಿಂಟಾಲ್‌ನಷ್ಟು ಹಾಗೂ ನೀರಾವರಿಯಲ್ಲಿ 6-7 ಕ್ವಿಂಟಾಲ್‌ನಷ್ಟು ಕಾಳಿನ ಇಳುವರಿ ನಿರೀಕ್ಷಿಸಬಹುದು.

**ತಳಿ:** ಎಲ್‌ಬಿಜಿ-625 **ಬೆಳೆಯ ಅವಧಿ:** 70-75 ದಿನಗಳು
**ಬಿತ್ತನೆ ಕಾಲ:** ಜನವರಿ-ಫೆಬ್ರವರಿ
**ವಿಶೇಷತೆ:** ಎತ್ತರದ ಗಿಡಗಳು ಹಾಗು ಹೊಳೆಯುವ ಕಾಳುಗಳು
**ಇಳುವರಿ:** ಖುಷ್ಕಿ ಬೇಸಾಯದಲ್ಲಿ ಉತ್ತಮ ನಿರ್ವಹಣೆಯಲ್ಲಿ ಎಕರೆಗೆ 4.0-4.5 ಕ್ವಿಂಟಾಲ್‌ನಷ್ಟು ಹಾಗೂ ನೀರಾವರಿಯಲ್ಲಿ 6-7 ಕ್ವಿಂಟಾಲ್‌ನಷ್ಟು ಕಾಳಿನ ಇಳುವರಿ ನಿರೀಕ್ಷಿಸಬಹುದು.

## ಅಲಸಂದೆ

**ತಳಿ:** ಸಿ-152
**ಬೆಳೆ ಅವಧಿ:** 85 ದಿನಗಳು
**ಬಿತ್ತನೆ ಕಾಲ:** ಜೂನ್- ಜುಲೈ
**ವಿಶೇಷತೆ:** ಕೆಂಪು ಗಟ್ಟಿ ಕಾಳಿನ ತಳಿ
**ಇಳುವರಿ:** ಖುಷ್ಕಿ ಬೇಸಾಯದಲ್ಲಿ ಉತ್ತಮ ನಿರ್ವಹಣೆಯಲ್ಲಿ ಎಕರೆಗೆ 3-3.5 ಕ್ವಿಂಟಾಲ್ ಹಾಗು ನೀರಾವರಿಯಲ್ಲಿ ಎಕರೆಗೆ 8-10 ಕ್ವಿಂಟಾಲ್‌ನಷ್ಟು ಇಳುವರಿ ನಿರೀಕ್ಷಿಸಬಹುದು.

**ತಳಿ:** ಬಿಳಿ (ಸ್ಥಳೀಯ)
**ಬೆಳೆಯ ಅವಧಿ:** 75 ದಿನಗಳು **ಬಿತ್ತನೆ ಕಾಲ:** ಜೂನ್- ಜುಲೈ
**ವಿಶೇಷತೆ:** ಬಿಳಿ ಗಟ್ಟಿ ಕಾಳಿನ ತಳಿ
**ಇಳುವರಿ:** ಖುಷ್ಕಿ ಬೇಸಾಯದಲ್ಲಿ ಉತ್ತಮ ನಿರ್ವಹಣೆಯಲ್ಲಿ ಎಕರೆಗೆ 3-3.5 ಕ್ವಿಂಟಾಲ್‌ನಷ್ಟು ಕಾಳಿನ ಇಳುವರಿ ನಿರೀಕ್ಷಿಸಬಹುದು.



## ಕಡಲೆ ಕಾಳು



**ತಳಿ:** ಜೆಜಿ-11
**ಬೆಳೆಯ ಅವಧಿ:** 95-100 ದಿನಗಳು
**ವಿಶೇಷತೆ:** ಬರ ನಿರೋಧಕ ತಳಿ, ಕಡಲೆ ಹಿಟ್ಟಿಗೆ ಹೆಚ್ಚು ಸೂಕ್ತವಾದ ತಳಿ
**ಇಳುವರಿ:** ಖುಷ್ಕಿ ಬೇಸಾಯದಲ್ಲಿ ಉತ್ತಮ ನಿರ್ವಹಣೆಯಲ್ಲಿ ಎಕರೆಗೆ 4-5 ಕ್ವಿಂಟಾಲ್ ಹಾಗೂ ನೀರಾವರಿಯಲ್ಲಿ ಎಕರೆಗೆ 8-10 ಕ್ವಿಂಟಾಲ್‌ನಷ್ಟು ಇಳುವರಿ ನಿರೀಕ್ಷಿಸಬಹುದು.

## ಅವರೆ




**ತಳಿ:** ಹೆಚ್ ಎ - 4
**ಬೆಳೆಯ ಅವಧಿ:** 90-95 ದಿನಗಳು
**ವಿಶೇಷತೆ:** ವರ್ಷಪೂರ್ತಿ ಬೆಳೆಯಬಹುದಾದ ತಳಿ. ಕಾಯಿ ಹೆಚ್ಚು ಸೊಗಡಿನಿಂದ ಕೂಡಿರುತ್ತದೆ.
**ಇಳುವರಿ:** ಉತ್ತಮ ನಿರ್ವಹಣೆಯಲ್ಲಿ ತರಕಾರಿಯಾಗಿ ಎಕರೆಗೆ 2-2.5 ಟನ್‌ನಷ್ಟು ಅಥವಾ ಎಕರೆಗೆ 2-3 ಕ್ವಿಂಟಾಲ್‌ನಷ್ಟು ಒಣ ಕಾಳಿನ ಇಳುವರಿಯನ್ನು ನಿರೀಕ್ಷಿಸಬಹುದು.

## ಹುರುಳಿ




**ತಳಿ:** ಕಂದು(ಸ್ಥಳೀಯ)
**ಬೆಳೆ ಅವಧಿ:** 120 ದಿನಗಳು **ಬಿತ್ತನೆ ಕಾಲ:** ಮೇ-ಸೆಪ್ಟೆಂಬರ್
**ವಿಶೇಷತೆ:** ಬರ ನಿರೋಧಕ ತಳಿ
**ಇಳುವರಿ:** ಏಕ ಬೆಳೆಯಾಗಿ ಉತ್ತಮ ನಿರ್ವಹಣೆಯಲ್ಲಿ ಎಕರೆಗೆ 3.5-4 ಕ್ವಿ ನಷ್ಟು ಕಾಳಿನ ಇಳುವರಿಯನ್ನು ನಿರೀಕ್ಷಿಸಬಹುದು.

## ಯಾರ್ಡ್ ಲಾಂಗ್ ಬೀನ್



**ಬೆಳೆಯ ಅವಧಿ:** 60-100 ದಿನಗಳು
**ಬಿತ್ತನೆ ಕಾಲ:** ವರ್ಷಪೂರ್ತಿ ಬೆಳೆಯಬಹುದು
**ವಿಶೇಷತೆ:** 70-75 ಸೆ.ಮೀ ನಷ್ಟು ಉದ್ದನೆಯ ಕಾಯಿಗಳು ಬಿಡುತ್ತದೆ. 60ನೇ ದಿನದಿಂದ 100 ದಿನದವರೆಗೂ ಕಾಯಿಗಳನ್ನು ತರಕಾರಿಗೆ ಕಟಾವು ಮಾಡಬಹುದು.
**ಇಳುವರಿ:** ಏಕ ಬೆಳೆಯಾಗಿ ಉತ್ತಮ ನಿರ್ವಹಣೆಯಲ್ಲಿ ಎಕರೆಗೆ 10-12 ಟನ್ ನಷ್ಟು ತರಕಾರಿ ಇಳುವರಿಯನ್ನು ನಿರೀಕ್ಷಿಸಬಹುದು

## ಮಡಿಕೆ ಕಾಳು



**ತಳಿ**: ಸ್ಥಳೀಯ

**ಬೆಳೆ ಅವಧಿ**: ೯೦ ದಿನಗಳು

**ಬಿತ್ತನೆ ಕಾಲ**: ಮೇ-ಜೂನ್

**ವಿಶೇಷತೆ**: ಬರನಿರೋಧಕ, ಕಡಿಮೆ ಫಲವತ್ತತೆಯಲ್ಲಿ ಬೆಳೆಯ ಬಹುದಾದ ಬೆಳೆ

**ಇಳುವರಿ**: ಏಕ ಬೆಳೆಯಾಗಿ ಉತ್ತಮ ನಿರ್ವಹಣೆಯಲ್ಲಿ ಎಕರೆಗೆ ೩.೦-೫.೦ ಕ್ವಿಂಟಾಲ್‌ನಷ್ಟು ಕಾಳಿನ ಇಳುವರಿಯನ್ನು ನಿರೀಕ್ಷಿಸಬಹುದು.

## ಮಸೂರು/ಕೇಸರಿ ದಾಲ್


**ತಳಿ**: ಸ್ಥಳೀಯ

**ಬೆಳೆಯ ಅವಧಿ**: ೮೦-೧೧೦ ದಿನಗಳು

**ಬಿತ್ತನೆ ಕಾಲ**: ನವೆಂಬರ್

**ವಿಶೇಷತೆ**: ಬರ ನಿರೋಧಕ, ಕಡಿಮೆ ಫಲವತ್ತತೆಯಲ್ಲಿ ಬೆಳೆಯಬಹುದಾದ ಬೆಳೆ

**ಇಳುವರಿ**: ಏಕ ಬೆಳೆಯಾಗಿ ಉತ್ತಮ ನಿರ್ವಹಣೆಯಲ್ಲಿ ಎಕರೆಗೆ 2-2.5 ಕ್ವಿಂಟಾಲ್‌ನಷ್ಟು ಕಾಳಿನ ಇಳುವರಿಯನ್ನು ನಿರೀಕ್ಷಿಸಬಹುದು.



# ಸುಸ್ಥಿರ ಭವಿಷ್ಯಕ್ಕಾಗಿ ಪೌಷ್ಟಿಕ ಬೀಜಗಳು

